# “ಪರಿಶುದ್ಧ” ಎಂಬ ಸಾಮಾಜಿಕ ಚಳುವಳಿ

ಎರಡು ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಾದ ಭೀಕರ ಪ್ರವಾಹದ ನೆನಪು ನಿಮ್ಮೆಲ್ಲರಿಗಿರಬಹುದು. ತದನಂತರ 'ಇನ್ಫೋಸಿಸ್ ಪ್ರತಿಷ್ಠಾನ' ದಾಖಲೆ ಸಮಯದಲ್ಲಿ ‘ಆಸರೆ’ ಯೋಜನೆಯಡಿ ನಿರಾಶ್ರಿತರಿಗೆಂದು 2262 ಮನೆಗಳ ನಿರ್ಮಾಣ ಮಾಡಿದ್ದೂ ಈಗ ಇತಿಹಾಸ. ಮುಂದೇನು ಎಂಬ ಯೋಚನೆಯಲ್ಲಿದ್ದಾಗ ನಮ್ಮ ಸುಧಾ ಮೇಡಮ್ ಮತ್ತು ವಾಸು ದೇಶಪಾಂಡೆಯವರಿಗೆ ಹೊಳೆದದ್ದು  ಗ್ರಾಮ ಸ್ವಚ್ಛತೆ ಮತ್ತು ನೈರ್ಮಲ್ಯ ಕುರಿತಾದ ವಿಚಾರ.

ಇಡೀ ದೇಶದಲ್ಲೇ ನಮ್ಮ ಉತ್ತರ ಕರ್ನಾಟಕ ( ಅದರಲ್ಲೂ ಹೈದರಾಬಾದ್-ಕರ್ನಾಟಕ ಎಂದು ಕರೆಯಲ್ಪಡುವ ಪ್ರದೇಶ) ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಪ್ರದೇಶಗಳಲ್ಲೊಂದು ಎನ್ನುವುದು ದುರದೃಷ್ಟಕರ ಸಂಗತಿ. ಈ ದುಸ್ಥಿತಿಗೆ ಮೂಲ ಕಾರಣಗಳನ್ನು ಹುಡುಕಿ ಹೊರಟಾಗ ಸಿಕ್ಕಿದ್ದು "ಶೌಚಾಲಯಗಳ ತೀವ್ರ ಕೊರತೆ" ಎಂಬ ವಾಸ್ತವ ಸತ್ಯ! ಉತ್ತರ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಇಂದಿಗೂ ಬಯಲು ಶೌಚವೆಂಬುದು ಸರ್ವೇಸಾಮಾನ್ಯ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸಮಸ್ಯೆಗೆ ಶೌಚಾಲಯಗಳ ಕೊರತೆಯೇ ಒಂದು ಮುಖ್ಯ ಕಾರಣ ಎಂದು ಅನೇಕ ಸರ್ಕಾರೀ ವರದಿಗಳು ತಿಳಿಸುತ್ತವೆ. ಆದರೂ ಈ ಸಮಸ್ಯೆಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಆದ ಪ್ರಯತ್ನಗಳು ಏನೇನೂ ಸಾಲದು. ವಿಶ್ವ ಆರೋಗ್ಯ ಸಂಸ್ಥೆಯ ವರದಿಯೊಂದರ ಪ್ರಕಾರ ಆರೋಗ್ಯ ಕ್ಷೇತ್ರದಲ್ಲಿ ನಮ್ಮ ದೇಶವು ವರ್ಷಕ್ಕೆ ಸುಮಾರು 55 ಶತಕೋಟಿ ಡಾಲರ್ಗಳಷ್ಟು ವೆಚ್ಚವನ್ನು ಮಾಡುತ್ತಿದೆ. ಇದಕ್ಕೂ ಶೌಚಾಲಯಗಳ ಕೊರತೆ ಹಾಗೂ ಜನರಲ್ಲಿನ ನೈರ್ಮಲ್ಯದ ಅಜ್ಞಾನವೇ ಕಾರಣವೆಂಬುದು ತಿಳಿದು ಬಂದಿದೆ. ಈ ಗಂಭೀರ ಸಮಸ್ಯೆಗೆ ಸಣ್ಣ ಮಟ್ಟದ ಒಂದು ಪರಿಹಾರವಾಗಿ ಹೊರಹೊಮ್ಮಿದ್ದೇ "ಪರಿಶುದ್ಧ" ಎಂಬ ಕಲ್ಪನೆ. ಈ ಕಲ್ಪನೆ ಇಂದು ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಸಾಮಾಜಿಕ ಹಾಗೂ ಸ್ವಚ್ಛ ಪರಿಸರ ಕುರಿತಾದ ಕ್ರಾಂತಿಯನ್ನೇ ಶುರು ಮಾಡಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಹತ್ತು ಸಾವಿರ ಶೌಚಾಲಯಗಳ ನಿರ್ಮಾಣದ ಗುರಿ ಹೊತ್ತಿದ್ದ ತಂಡಕ್ಕೆ ಇಂದು ಇಪ್ಪತ್ತ್ಮೂರು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮನವಿಗಳು ಬಂದಿವೆ ! ಮೊದ ಮೊದಲು ಜನ ಮುಂದೆ ಬರ್ತಾರ ? ಶೌಚಾಲಯ ಕಟ್ಟಿಸಿಕೊಳ್ತಾರ ? ಅನ್ನೋ ಪ್ರಶ್ನೆಗಳಿದ್ದರೆ ... ಇತ್ತೀಚೆಗೆ "ಹೇಗಪ್ಪ ಇಷ್ಟು ಜನರಿಗೆ ಪೂರೈಸೋದು" ಅನ್ನೋ ಚಿಂತೆ!

ನಮ್ಮ ಮುಂದಾಳುಗಳ ದೃಷ್ಟಿಯಿಂದ ಹೇಳಬೇಕೆಂದರೆ , "ಪರಿಶುದ್ಧ" ದ ನೆಪದಲ್ಲಿ ನಮಗೆ ಹಳ್ಳಿ ಹಳ್ಳಿ ಸುತ್ತೋ ಅವಕಾಶ ಸಿಕ್ತು. ಕಳೆದ 5-6 ತಿಂಗಳುಗಳಲ್ಲಿ ಸುಮಾರು 35ಕ್ಕೂ ಹೆಚ್ಚಿನ ಹಳ್ಳಿಗಳಲ್ಲಿ ಸುತ್ತಾಡಿದ್ದೇವೆ. ಹಳ್ಳಿಯ ಜನರೊಡನೆ ಕುಳಿತು ಕಷ್ಟ-ಸುಖ ವಿಚ್ಚಾರಿಸಿದ್ದಿದೆ, ರೊಟ್ಟಿ-ಪಲ್ಯೆಯನ್ನು ಅವರೊಂದಿಗೆ ಸವಿದಿದ್ದೇವೆ. ಅಲ್ಲಿನ ವಾತಾವರಣ , ನೆಮ್ಮದಿಯ ಪರಿಸರವನ್ನು ಕಂಡು ಅಸೂಯೆಗೊಂಡರೂ , ಅಲ್ಲಿಯ ಬಡತನ, ದೈನಂದಿನ ಸಮಸ್ಯೆಗಳನ್ನು ಕೇಳ್ದಾಗ ಮರುಕ ಪಟ್ಟಿದ್ದೇವೆ. ಒಟ್ನಲ್ಲಿ ಹೇಳಬೇಕೆಂದ್ರೆ "ಹಳ್ಳಿಗಳ ದೇಶ" ದ ಪ್ರಜೆಗಳಾದ ನಾವು ಕೊನೆಗೂ ಹಳ್ಳಿಗಳಲ್ಲಿ ಕೆಲ ಸಮಯ ಕಳೆದು ಅಲ್ಲಿನ ಜನಜೀವನದ ಬಗ್ಗೆ ಅರಿತುಕೊಂಡು,

ಅವರ ಸಮಸ್ಯೆಗಳಿಗೆ ನಮ್ಮದೇ ಆದ ರೀತಿಯಲ್ಲಿ ಪರಿಹಾರ ಕೊಡುವ ಪ್ರಯತ್ನವನ್ನು ಮಾಡಿದ್ದೇವೆ. ಮಾತು ಕೇಳದಿದ್ದವರ ಜೊತೆ ಜಗಳವಾಡಿದ್ದೇವೆ. ಸಹಕಾರ ಕೊಡದವರನ್ನು ಬೈದುಕೊಂಡಿದ್ದೇವೆ ಆದರೆ ಮೂಲೋದ್ದೇಶದಿಂದ ಎಂದು ವಿಚಲಿತರಾಗಲಿಲ್ಲ ಎಂಬುದು ಒಂದು ಸಂತೋಷದ ವಿಚಾರ. ಈ ಸಂದರ್ಭದಲ್ಲಿ, ಗುಲ್ಬರ್ಗಾದಲ್ಲೇ ಬೀಡು ಬಿಟ್ಟು ಹಗಲಿರುಳೂ "ಪರಿಶುದ್ಧ" ಕಾರ್ಯಕ್ರಮದ ಯಶಸ್ಸಿಗೆ ದುಡಿಯುತ್ತಿರುವ  ತಂಡಕ್ಕೆ ಶಹಭಾಸ್ಗಿರಿಯನ್ನು ಕೊಡಲೇಬೇಕು.

ಬಯಲು ಶೌಚಮುಕ್ತ ಗ್ರಾಮಗಳ ನಿರ್ಮಾಣಕ್ಕೆ ಅನೇಕ ಗ್ರಾಮ ಪಂಚಾಯಿತಿಗಳು ಇಂದು ಮುಂದೆ ಬಂದಿರುವುದು ಅತ್ಯಂತ ಸಂತಸದ ಸುದ್ದಿ. ಸ್ವಚ್ಛ, ಸುಂದರ , ಹಾಗೂ ಸಮೃದ್ಧ ಹಳ್ಳಿಗಳು ಈ ದೇಶದ ಅಭಿವೃದ್ಧಿಗೂ ಪೂರಕವಲ್ಲವೇ ?  "ಪರಿಶುದ್ಧ" ಈ ನಿಟ್ಟಿನಲ್ಲಿ ಒಂದು ದಿಟ್ಟ ಹೆಜ್ಜೆ. ಇಂತಹ ಪ್ರಯತ್ನಗಳು ಹೆಚ್ಚೆಚ್ಚು ನಡೆಯಲಿ.

